ಹೋಗುತ್ತಿರುತ್ತದೆ, ಅಲ್ಲಿಂದ ಈ ಕಡೆ ಬಂದಿದೆ. ನಾವು ಏನು ಮಾಡಬೇಕು?

ಶ್ರೀ ಎಂ.ಪಿ.ಪ್ರಕಾಶ್: ಸನ್ಮಾನ್ಯ ಅಧ್ಯಕ್ಷರೆ, ನಾವೆಲ್ಲರೂ ಕೂಡ ಗಾಜಿನ ಮನೆಯಲ್ಲಿದ್ದೇವೆ. ಇದನ್ನು ಕನಿಷ್ಠ ಪಕ್ಷ ಇಷ್ಟಾದರೂ ತಾವು ಒಪ್ಪಿಕೊಳ್ಳಬೇಕಾಗುತ್ತದೆ. ನಾವೆಲ್ಲಾ ಗಾಜಿನ ಮನೆಯಲ್ಲಿದ್ದು ಈ ತತ್ವದ ವಿಚಾರದಲ್ಲಿ ಕಲ್ಲು ಒಗೆಯುವ ಕೆಲಸ ಮಾಡಿದರೆ ನಾವೇನೂ ಯಶಸ್ವಿಯಾಗುವುದಿಲ್ಲ. ಆದುದರಿಂದ ಈ ಸಂದರ್ಭದಲ್ಲಿ ನಾನು ಹೇಳುವುದಿಷ್ಟೆ, ಈಗಲಾದರೂ ಕೂಡ ಹಿರಿಯರಾದಂಥವರು ಆ ಜಿಲ್ಲಾ ಪಂಚಾಯತಿಯಲ್ಲಿರುವವರು ಒಳ್ಳೆಯ ಮಾರ್ಗದರ್ಶನ ಮಾಡಲಿ, ಮುಂದಿನ ಚುನಾವಣೆಗಳೂ ಕೂಡ ಕಾನೂನುಬದ್ಧವಾಗಿ ನಡೆಯಲಿ, ದಕ್ಷರಾದಂಥ ಅಧಿಕಾರಿಗಳು ಅಲ್ಲಿಗೆ ಹೋದಂಥ ಸಂದರ್ಭದಲ್ಲಿ ಅವರಿಗೆ ಸ್ವಲ್ಪಮಟ್ಟಿಗೆ ನೈತಿಕ ಬೆಂಬಲ ಇಲ್ಲದಿದ್ದರೆ ನಿರ್ವಹಣೆ ಮಾಡುವುದು ಬಹಳ ಕಷ್ಟವಾಗುತ್ತದೆ. ಅದನ್ನು ನಾನು ಈ ಸದನದ ಮೂಲಕ ಮಾನ್ಯ ಹಿರಿಯರಲ್ಲಿ ವಿನಂತಿ ಮಾಡಿಕೊಳ್ಳುತ್ತಾ ಇಲ್ಲಿಗೆ ಇದನ್ನು ಮುಕ್ತಾಯಗೊಳಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಚೇರ್ಮನ್: ಈಗ ಸದನವನ್ನು ಮಧ್ಯಾಹ್ನ 3.30 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು ಮಧ್ಯಾಹ್ನ 2.12 ಗಂಟೆಗೆ ಮುಂದೂಡಲ್ಪಟ್ಟು ಮತ್ತೆ 3.30 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು)

(ಸದನವು ಪುನಃ 3.35 ನಿಮಿಷಕ್ಕೆ ಪ್ರಾರಂಭವಾಯಿತು)

(ಸಭಾಧ್ಯಕ್ಷರು (ಶ್ರೀ ರಮೇಶ್‌ಕುಮಾರ್)ರವರು ಪೀಠವನ್ನಾಲಂಕರಿಸಿದರು)

(5) ಶಾಸನ ರಚನೆ ಕಾರ್ಯಕಲಾಪ

ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕ 1997 ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಸಾರಿಗೆ ಮಂತ್ರಿಗಳು): ಮಾನ್ಯ ಅಧ್ಯಕ್ಷರೆ, 1997ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ;

''1997ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು'

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಸಾರಿಗೆ ಮಂತ್ರಿಗಳು): ಮಾನ್ಯ ಅಧ್ಯಕ್ಷರೆ, 1997ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು *ವಿಧೇಯಕವನ್ನು ಮಂಡಿಸಲಾಗಿದೆ*

ಅಧ್ಯಕ್ಷರು: ಇನ್ನೊಂದು ವಿಧೇಯಕ ಮಂಡಿಸುವ ಸಚಿವರು ಇಲ್ಲವಲ್ಲಾ ಸಿಂಧ್ಯಾರವರೇ ನೀವು ಯೋಚನೆ ಮಾಡಬೇಕು. ಕಾರ್ಯಕಲಾಪಗಳ ಪಟ್ಟಿಯಲ್ಲಿ ಅವರ ಹೆಸರನ್ನು ತೋರಿಸಿರುತ್ತೀರಿ, ನಾನು ಹೇಗೆ ಮಾಡಲಿ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಕೋರಂ ಅವರ ಕಡೆ ಇಲ್ಲ ಒಪ್ಪುತ್ತೇವೆ. ಆದರೆ ಮಂಡಿಸುವವರೂ ಕೂಡ ಇಲ್ಲ ಅಂದರೆ ಹೇಗೆ ಇದು?

MR.SPEAKER:- Atleast they should communicate to me.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಿಮಗೆ ಕಮ್ಯೂನಿಕೇಟ್ ಮಾಡಲೇ ಬೇಕು. ಸದನಕ್ಕೆ. ಹೋಗದೇ ಇದ್ದರೆ ನಡೆಯುತ್ತದೆ ಎನ್ನುವುದಕ್ಕೆ ಇದೊಂದು ಉದಾಹರಣೆಯಾಗುತ್ತದೆ.

MR. SPEAKER:- I am not prepared to take any of the Bills.

ಶ್ರೀ ಬಿ.ಎಸ್.ಯಡಿಯೂರಪ್ಪ: ಅವರು ಬರುವವರೆಗೆ ವಿಧೇಯಕವನ್ನು ಮಂಡಿಸಲು ಅವಕಾಶವನ್ನು ದಯಮಾಡಿ ಕೊಡಬೇಡಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅವರು ಸಂಬಳ, ಸಾರಿಗೆ ಎಲ್ಲವನ್ನೂ ತೆಗೆದುಕೊಳ್ಳುತ್ತಾರೆ ಕೊನೆಯಪಕ್ಷ ಇಲ್ಲಿ ಬಂದು ವಿಧೇಯಕವನ್ನು ಮಂಡಿಸುವ ಕೆಲಸವಾದರೂ ಮಾಡಲಿ.

MR. SPEAKER:- I am not taking up those Bills for consideration and even for introduction.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಆಯಿತು ಸರ್; ಅವರನ್ನು ಕರೆಸುತ್ತೇನೆ.

---

* ಅನುಬಂಧ I